

ಜೋರಾಗಿ ನಗು ಬಂತು. ನಕ್ಕೆ. ಅವಳೂ ನಕ್ಕಳು. ಹಸಿವು. ರೂಂ ಸರ್ವೀಸಿಗೆ ಫೋನು ಮಾಡಿ ವೆಜ್ ಸ್ಯಾಂಡ್ವಿಚ್, ಕಾಫಿ ಹೇಳಿದೆ. ಬಂತು. ತಿಂದು, ಕಾಫಿ ಕುಡಿದಮೇಲೆ, 'ಹೊರಡು, ಸ್ವಲ್ಪ ಹಾಗೇ ತಿರುಗಾಡಿಕೊಂಡು ಬರೋಣ' ಎಂದಳು. 'ಸ್ನಾನ ಮಾಡಿ ಬರುತ್ತೇನೆ, ತಡಿ' ಎಂದೆ. ತಲೆಯಾಡಿಸಿದಳು.

ಸ್ನಾನದ ಕೋಣೆಯಲ್ಲಿದ್ದರೂ ನನ್ನ ಮನಸ್ಸೆಲ್ಲ ರೂಮಿನ ಕಡೆಯೇ ಇತ್ತು. ನನ್ನ ಪರ್ಸ್, ಪಾಸ್‌ಪೋರ್ಟ್ ಎಲ್ಲಾ ಅಲ್ಲೇ ಇದ್ದವು. ಬೇಗನೆ ಸ್ನಾನ ಮುಗಿಸಿ ಹೊರ ಬಂದೆ. ನನ್ನ ಪಾಸ್‌ಪೋರ್ಟ್, ಪರ್ಸ್ ಅಲ್ಲೇ ಮಂಚದ ಪಕ್ಕದ ಟೀಪಾಯ್ ಮೇಲೆ ಇಟ್ಟಂತೆಯೇ ಇದ್ದವು. ನಿಟ್ಟುಸಿರು. ಅವಳು ರೂಮಿನಲ್ಲಿದ್ದ ಇಂಗ್ಲಿಷ್ ಪತ್ರಿಕೆಯೊಂದನ್ನು ಆರಾಮಾಗಿ ತಿರುವುಹಾಕುತ್ತಾ ಕುಳಿತಿದ್ದಳು.

ರೂಮಿನಿಂದ ಹೊರಬಂದು ಮರಳ ದಂಡೆಯ ಮೇಲೆ ನಡೆದವು. ನನ್ನ ಸಮೀಪ ಬಂದು ತೋಳನ್ನು ಹಿಡಿದುಕೊಂಡು ನಡೆದಳು. ಮಾತಿನಲ್ಲಿ ಓಶೋ, ಜಿಬ್ರಾನ್, ರೂಮಿ, ಕಾಮು, ಕಾಫ್ಕ, ಮಾರ್ಕ್ವೆಸ್, ಪಾಲ್ ಕೋಹ್ಲಿ, ಮುರಗಾಮಿ, ಫ್ರಾನ್ಸಿಸ್ ಫೋರ್ಡ್ ಕಪೋಲ, ಕುರಸಾವೊ,